# ಕಲಿಕೆಯ ಬಲವರ್ಧನೆ | ನಾವು ಉತ್ತಮವಾಗಿ ಇನ್ನೂ ಏನೆಲ್ಲಾ ಮಾಡಬಹುದು

ಅರ್ಚನಾ ಆರ್

ಆಲ್ಫಿ ಕೊಹ್ನ್ ಅವರ 'ದಿ ಹೋಮ್‌ವರ್ಕ್ ಮಿಥ್' (ಮನೆಗೆಲಸ ಎಂಬ ಮಿಥ್ಯಾಕಲ್ಪನೆ) ಪುಸ್ತಕದಲ್ಲಿ, ಶಿಕ್ಷಕರು ಮತ್ತು ಪೋಷಕರು ಮನೆಗೆಲಸವನ್ನು ಹೇಗೆ ನಿರಂತರವಾಗಿ ಸಮರ್ಥಿಸಿಕೊಂಡು ಬಂದಿದ್ದಾರೆ ಮತ್ತು ಕೆಲವು ಮಾಹಿತಿಯನ್ನು ಯಾವ ರೀತಿಯಲ್ಲಿ ತಪ್ಪಾಗಿ ಅರ್ಥಮಾಡಿಕೊಂಡು ಅದನ್ನೇ ಮುಂದುವರಿಸಿಕೊಂಡು ಹೋಗಲಾಗುತ್ತದೆ ಎಂಬಂತಹ ತಪ್ಪು ಕಲ್ಪನೆಗಳ ಬಗ್ಗೆ ರಚನಾತ್ಮಕವಾದ ಪರಿಶೋಧನೆ ಇದೆ. ಈ ಪುಸ್ತಕದಲ್ಲಿ ನನಗೆ ಕಂಡುಬಂದ ಅತ್ಯಂತ ಆಸಕ್ತಿದಾಯಕ, ಮನವೊಪ್ಪಿಸುವ ಮತ್ತು ಒಟ್ಟಾರೆಯಾಗಿ ದಿಗಿಲು ಹುಟ್ಟಿಸುವ ಸಮರ್ಥನೆಯ ವಾದವು ಇರಾನಿ ಚಲನಚಿತ್ರ ನಿರ್ಮಾಪಕ ಅಬ್ಬಾಸ್ ಕಿಯಾರೊಸ್ತಮಿ ಅವರ ಸಾಕ್ಷ್ಯಚಿತ್ರದಲ್ಲಿ ಕಾಣಸಿಗುತ್ತದೆ. 'ಹೋಮ್‌ವರ್ಕ್' ಎಂಬ ಶೀರ್ಷಿಕೆಯ ಅವರ ಸಾಕ್ಷ್ಯಚಿತ್ರದಲ್ಲಿ, ಹೆಸರಾಂತ ನಿರ್ದೇಶಕರು ವಿವಿಧ ವಯೋಮಾನದ ಇರಾನಿನ ಮಕ್ಕಳಿಗೆ ಮನೆಗೆಲಸದ ಬಗ್ಗೆ ಸರಳ ಪ್ರಶ್ನೆಗಳನ್ನು ಕೇಳುತ್ತಾರೆ. ಅವರು ಮಕ್ಕಳಿಗೆ ಎಷ್ಟು ಹೋಮ್‌ವರ್ಕ್ ಅನ್ನು ನೀಡಲಾಗುತ್ತದೆ, ಅದನ್ನು ಪೂರ್ಣಗೊಳಿಸಲು ಅವರಿಗೆ ಎಷ್ಟು ಸಮಯ ಬೇಕಾಗುತ್ತದೆ, ಅದನ್ನು ಪೂರ್ಣಗೊಳಿಸಲು ಅವರಿಗೆ ಬೆಂಬಲ ಸಿಗುತ್ತದೆಯೇ ಮತ್ತು ಅವರ ನೆಚ್ಚಿನ ಚಟುವಟಿಕೆಗಳು ಯಾವುವು ಎಂಬ ಬಗ್ಗೆ ಕೇಳುತ್ತಾರೆ. ಮಕ್ಕಳು ಹೆಚ್ಚಿನ ಮನೆಗೆಲಸವನ್ನು ಪಡೆಯುತ್ತಾರೆ ಮತ್ತು ಅದನ್ನು ಪೂರ್ಣಗೊಳಿಸಲು ಶಾಲೆಯ ನಂತರದ ಹೆಚ್ಚಿನ ಸಮಯವನ್ನು ತೆಗೆದುಕೊಳ್ಳುತ್ತಾರೆ ಎಂಬುದು ಸ್ಪಷ್ಟವಾಗಿದೆ. ಆದರೆ ಇದರ ಜೊತೆಗೆ, ಸಾಕ್ಷ್ಯಚಿತ್ರವು, ಮನೆಗೆಲಸವು ಮಕ್ಕಳ ಮೇಲೆ ಬೀರುವ ಪರಿಣಾಮವನ್ನು ಸಹ ಸೂಕ್ಷ್ಮವಾದ ರೀತಿಯಲ್ಲಿ ಪರಿಶೋಧಿಸುತ್ತದೆ. ಮಕ್ಕಳನ್ನು ಮನೆಗೆಲಸ ಅಥವಾ ಕಾರ್ಟೂನ್ ವೀಕ್ಷಣೆಗಳ ನಡುವೆ ಯಾವುದಕ್ಕೆ ಆದ್ಯತೆ ನೀಡುತ್ತೀರಾ ಎಂದು ಕೇಳಿದಾಗ, ಪ್ರತಿಯೊಬ್ಬರೂ ಸಹಜವಾಗಿಯೇ 'ಮನೆಗೆಲಸ' ಎಂದು ಹೇಳಿದರು. ಮತ್ತೆ ಮತ್ತೆ ಒತ್ತಿ ಕೇಳಿದಾಗಲೂ ಬಹಳಷ್ಟು ಮಕ್ಕಳು ಇದೇ ಉತ್ತರಕ್ಕೆ ಅಂಟಿಕೊಂಡಿದ್ದರು. ಹೀಗೆ ಹಲವಾರು ಬಾರಿ ಪ್ರಯತ್ನಿಸಿದ ನಂತರ ಅವರಲ್ಲಿ ಒಬ್ಬರು ಅಥವಾ ಇಬ್ಬರು ಮಾತ್ರ (ಸಾಕಷ್ಟು ಸಂಕೋಚದಿಂದ) ಕಾರ್ಟೂನ್ ಗಳನ್ನು ವೀಕ್ಷಿಸಲು ಬಯಸುತ್ತೇವೆ ಎಂದು ಒಪ್ಪಿಕೊಂಡರು. ಮಕ್ಕಳು ತಮಗೆ ಆಸಕ್ತಿದಾಯಕವಲ್ಲದ ಮತ್ತು ತಮ್ಮ ಕಲಿಕೆಯ ಅನುಭವಕ್ಕೆ ಸಹಾಯಕವಾಗದ ಕೆಲಸವನ್ನು ಮಾಡುತ್ತಿದ್ದರೂ, ಈ ಕೆಲಸವು ಅವರನ್ನು ಉತ್ತಮ ವಿದ್ಯಾರ್ಥಿಯನ್ನಾಗಿ ಸ್ಥಾಪಿಸುವ ಗುರುತಾಗಿದೆ. ಈ ಸಂಕೋಚ, ಹಿಂಜರಿಕೆ ಮತ್ತು ತ್ವರಿತವಾಗಿ ಪ್ರತಿಕ್ರಿಯಿಸುವ ಅಗತ್ಯವು ಈ ಕೆಲಸದ ಅತಿರೇಕದ ಪರಿಣಾಮವಾಗಿದೆ ಎಂದು ನಾವು ಅರ್ಥಮಾಡಿಕೊಂಡಿದ್ದೇವೆ.

ನಮಗೆ ತಿಳಿದಿರುವಂತೆ, ಇಲ್ಲಿನ ಸಮಸ್ಯೆಯೆಂದರೆ ಮನೆಗೆಲಸವು ಒಂದು ರೀತಿಯ ಬಲವರ್ಧನೆಯಾಗಿದೆ; ಮನೆಗೆಲಸವನ್ನು ಪ್ರತಿದಿನ ನೀಡಬೇಕು; ಮತ್ತು ನಿಯಮಿತವಾಗಿ ಮನೆಗೆಲಸ ಮಾಡುವ ಮಕ್ಕಳು ಅತ್ಯುತ್ತಮ ಕಲಿಕೆಯ ಮಟ್ಟವನ್ನು ಸಾಧಿಸುತ್ತಾರೆ ಎಂದು ಹಲವಾರು ಜನರು ವಾದಿಸುತ್ತಾರೆ. ಈ ರೀತಿಯ ವಾದವು ಹೊಸದೇನಲ್ಲ. ಆದರೆ ಸಾಕ್ಷ್ಯಚಿತ್ರವು ಎರಡು ಆಸಕ್ತಿದಾಯಕ ಅಂಶಗಳನ್ನು ಹೊರತರುತ್ತದೆ. ಮೊದಲನೆಯ–ದಾಗಿ, ಮಕ್ಕಳು ಪ್ರತಿದಿನ ಮನೆಗೆಲಸ ಮಾಡಬೇಕು ಎಂದಾದರೆ ಏನಾಗುತ್ತದೆ? ಎರಡನೆಯದಾಗಿ, 'ಉತ್ತಮ ವಿದ್ಯಾರ್ಥಿ' ಎಂಬ ಕಲ್ಪನೆಯನ್ನು ಉತ್ತಮ ಕಲಿಕೆಯ ಮಟ್ಟವನ್ನು ಹೊಂದಿರುವ ಅಷ್ಟೂ ಮಕ್ಕಳಿಗೆ ಪರಸ್ಪರ ವಿನಿಮಯ ಸಾಧ್ಯವಾಗಿ ಬಳಸಲಾಗುತ್ತದೆಯೇ? ಈ ಲೇಖನವು ಈ ಎರಡು ಪ್ರಶ್ನೆಗಳಿಗೆ ಪ್ರತಿಸ್ಪಂದಿಸುತ್ತಾ ಕಲಿಕೆಯ ಬಲವರ್ಧನೆಯನ್ನು ಪರಿಶೋಧಿಸುತ್ತದೆ.

## ಮನೆಗೆಲಸ ಎಂದರೇನು?

ನಾನು ಯಾದಗಿರಿಯಲ್ಲಿ ಕಳೆದ ನಾಲ್ಕು ವರ್ಷಗಳಲ್ಲಿ ಭೇಟಿ ನೀಡಿದ ಪ್ರತಿ ಶಾಲೆಯ ಶಿಕ್ಷಕರು ಮಕ್ಕಳು ಮನೆಗೆಲಸ ಮಾಡದ ಕಾರಣ ಅವರ ಕಲಿಕೆಯು ಬಳಲುತ್ತಿದೆ ಎಂದು ಅಭಿಪ್ರಾಯ ಪಡುತ್ತಾರೆ. ಇಲ್ಲಿನ ಮಕ್ಕಳ ಸಾಮಾಜಿಕ–ಆರ್ಥಿಕ–ಸಾಂಸ್ಕೃತಿಕ ಹಿನ್ನೆಲೆಯನ್ನು ಆಧರಿಸಿ ಹೇಳುವುದಾದರೆ, ಮಕ್ಕಳು ಮನೆಯಲ್ಲಿ ಕೆಲಸ ಮಾಡುವುದಿಲ್ಲ ಎಂದು ಹೇಳುವುದು ಖಂಡಿತ ಸತ್ಯವಲ್ಲ. ಏಕೆಂದರೆ ಎಲ್ಲಾ ಮಕ್ಕಳು, ವಿಶೇಷವಾಗಿ ಎರಡನೆಯ ತರಗತಿಗಿಂತ ಮೇಲ್ಪಟ್ಟ ಮಕ್ಕಳು ತಮ್ಮದೇ ಆದ ಜವಾಬ್ದಾರಿಗಳನ್ನು ಹೊಂದಿರುವ ಮಕ್ಕಳಾಗಿದ್ದು ಸದಾ ಕಾರ್ಯನಿರತರಾಗಿರುತ್ತಾರೆ. ಆದ್ದರಿಂದ, ಉತ್ತಮ ಸಾಮಾಜಿಕ–ಆರ್ಥಿಕ ಪರಿಸ್ಥಿತಿಗಳಿಂದ ಬರುವ ವಿದ್ಯಾರ್ಥಿಗಳಿಗೆ ಭಿನ್ನವಾಗಿ, ಈ ಮಕ್ಕಳು 'ಶಾಲಾ ಕೆಲಸ' ಮಾಡಲು ಆದ್ಯತೆ ನೀಡುವುದಿಲ್ಲ ಎಂಬ ಆರೋಪವನ್ನು ಎದುರಿಸುತ್ತಾರಾದರೂ ಮನೆಯಲ್ಲಿ ಅವರ ಕುಟುಂಬಗಳು ನಿರೀಕ್ಷಿಸುವ ಕೆಲಸಗಳನ್ನು ಮಾಡಲು ಅವರಿಗೆ ಯಾವುದೇ ಹಿಂಜರಿಕೆಯಿಲ್ಲ. ಏತನ್ಮಧ್ಯೆ, ನಾವು ಶಿಕ್ಷಕರು ನೀಡುವ ಮನೆಗೆಲಸವನ್ನು ಈ ಕೆಳಗಿನ ರೀತಿ ವರ್ಗೀಕರಣ ಮಾಡಬಹುದು:

ಮನೆಗೆಲಸ → ತರಗತಿಯ ಸಮಯದಲ್ಲಿ ಪೂರ್ಣಗೊಳಿಸಲು ಸಾಧ್ಯವಾಗದ್ದನ್ನು ಮುಗಿಸುವುದು

ಮನೆಗೆಲಸ → ಈಗಾಗಲೇ ತರಗತಿಯಲ್ಲಿ ಚರ್ಚೆ ಮಾಡಿದ ಉದಾಹರಣೆಗಳ ಅಭ್ಯಾಸಗಳನ್ನು ಮುಂದುವರಿಸುವುದು

ಮನೆಗೆಲಸ → ಮರುದಿನದ ವಿಷಯಕ್ಕೆ ತಯಾರಿ ನಡೆಸುವುದು

ಈ ಮೂರರ ಪೈಕಿ ಮೂರನೇ ಆಯ್ಕೆಯಲ್ಲಿ ಮಕ್ಕಳನ್ನು ಚೆನ್ನಾಗಿ ತೊಡಗಿಸಿಕೊಳ್ಳುವ ಅವಕಾಶ ಇರುವುದನ್ನು ನಾವು ಗಮನಿಸಬಹುದು. ಮೊದಲನೆಯದನ್ನು ಕೇವಲ ದಾಖಲೆಗಳನ್ನು ನಿರ್ವಹಿಸುವ ಸಲುವಾಗಿ ಮಾಡಲಾಗುತ್ತದೆ. ಆದರೆ ಎರಡನೆಯ ಆಯ್ಕೆಯು ಯಾರ ಬೆಂಬಲವೂ ಇಲ್ಲದೆ ಸ್ವತಃ ಮಾಡಲು ಹೆಚ್ಚಿನ ಮಕ್ಕಳಿಗೆ ತುಂಬಾ ಸವಾಲಾಗಿ ಪರಿಣಮಿಸುತ್ತದೆ. ಆದ್ದರಿಂದ, ಮೊದಲ ಎರಡು ರೀತಿಯ ಮನೆಗೆಲಸಗಳು ನಕಲು ಕಾರ್ಯ ಚಟುವಟಿಕೆಯಾಗಿ ಪರಿವರ್ತಿತವಾಗುವುದನ್ನು ನಾವು ನೋಡುತ್ತೇವೆ. ಇದು ಸುಮಾರು 60 ಪ್ರತಿಶತ ತರಗತಿ ಕೊಠಡಿಗಳ ವಿಷಯದಲ್ಲಿ ಮಾತ್ರ ನಿಜ ಎಂದು ನಾವು ಒಪ್ಪಿಕೊಂಡರೂ ಸಹ ನಾವು ಪ್ರಧಾನವಾಗಿ ಈ ಕೆಳಗಿನದನ್ನು ಪಾಲಿಸಲು ಹೇಳುತ್ತಿದ್ದೇವೆ ಎಂಬುದನ್ನು ಇದು ಇನ್ನೂ ಸೂಚಿಸುತ್ತದೆ.

ಬಲವರ್ಧನೆ → ಮನೆಗೆಲಸ → ನಕಲು ಕೆಲಸ ಕಲಿಕೆಯಲ್ಲಿ ಸುಧಾರಣೆ

ಇದರ ಫಲಿತವನ್ನು ಸ್ಥೂಲವಾಗಿ ಹೀಗೆ ಸಂಕ್ಷಿಪ್ತಗೊಳಿಸಬಹುದು:

ಬಲವರ್ಧನೆ (ಇದು ವಾಸ್ತವವಾಗಿ ಅಭ್ಯಾಸಕ್ಕಿಂತ ಹೆಚ್ಚಿನದ್ದು) → ಮನೆಗೆಲಸ ( ಸಾಮಾನ್ಯವಾಗಿ ಬರೆವಣಿಗೆ ರೂಪದ್ದು) → ನಕಲು ಕೆಲಸ (ಆಯಾಸಕರ, ಆಸಕ್ತಿರಹಿತ, ಮತ್ತು ಮಕ್ಕಳ ಸಂಜ್ಞಾನಾತ್ಮಕ ಅಥವಾ ವಿಮರ್ಶಾತ್ಮಕ ಸಾಮರ್ಥ್ಯಗಳನ್ನು ಸೂಕ್ತವಾಗಿ ತೊಡಗಿಸಿಕೊಳ್ಳುವುದಿಲ್ಲ) → ಕಲಿಕೆಯಲ್ಲಿ ಸುಧಾರಣೆ (ಅಪರೂಪದ, ಕನಿಷ್ಠ ಮಟ್ಟದ್ದಾಗಿದ್ದು, ನಿರೀಕ್ಷಿತ ಪ್ರಮಾಣದಲ್ಲಿ ಆಗುವುದಿಲ್ಲ).

ನಾವು ಸಾಮಾನ್ಯವಾಗಿ ಕಲಿಕೆಯ ಬಲವರ್ಧನೆ ಎಂದರೆ ಏನು ಎಂಬುದನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸುತ್ತೇವೆ. ಆದರೆ ನಾವು, ಕಲಿಕೆಯ ಬಲವರ್ಧನೆಯು ಏನನ್ನು ಒಳಗೊಂಡಿರಬೇಕು ಎಂಬ ಪ್ರಶ್ನೆಯನ್ನು ಕೇಳಿದರೆ ಬಹುಶಃ ಅದನ್ನು ಅರ್ಥಮಾಡಿಕೊಳ್ಳಲು ನಮಗೆ ಇನ್ನೂ ಉತ್ತಮ ಅವಕಾಶ ದೊರೆಯುತ್ತದೆ. ಏಕೆಂದರೆ, ಆಗ ಮನೆಗೆಲಸದಂತಹ ಲಿಖಿತ ಅಭ್ಯಾಸಗಳನ್ನು (ಅವುಗಳಲ್ಲಿ ಕೆಲವು ನಕಲು ಕೆಲಸ ಆಗಿರಬಹುದು) ವ್ಯಾಖ್ಯಾನದಲ್ಲಿ ಸೇರಿಸಿದರೂ ಸಹ, ಅವು ಬಲವರ್ಧನೆಯ ಒಂದು ಸಣ್ಣ ಭಾಗವನ್ನು ಮಾತ್ರ ಆಕ್ರಮಿಸುತ್ತವೆ. ಇದರಿಂದ ನಾವು ಇತರ ಎಲ್ಲಾ ಘಟಕಗಳಿಗೆ ಪ್ರತಿಕ್ರಿಯಿಸಲು ಅನುವಾಗುತ್ತದೆ.

## ಬಲವರ್ಧನೆಯ ವಿಧಗಳು

ಒಂದು ಪರಿಕಲ್ಪನೆಯ ತಿಳಿವಳಿಕೆಯನ್ನು ಬಲಪಡಿಸಲು, ಬಲವರ್ಧನೆಯು ಮಕ್ಕಳು ತಮ್ಮ ಪರಿಸರದಿಂದ ಕಲಿತದ್ದನ್ನು ಸಂದರ್ಭೋಚಿತಗೊಳಿಸುವುದನ್ನು; ಉದಾಹರಣೆಗಳನ್ನು ಕಂಡುಹಿಡಿಯುವುದನ್ನು; ಒಂದು ವ್ಯಾಖ್ಯಾನವನ್ನು ಅನ್ವಯಿಸುವುದನ್ನು; ಅವರ ಸುತ್ತಲಿನ ಪ್ರಕ್ರಿಯೆಗಳ ವಿಷಯದಲ್ಲಿ ಆ ವ್ಯಾಖ್ಯಾನವು ಕಾರ್ಯನಿರ್ವಹಿಸುತ್ತದೆಯೇ ಎಂದು ಪರಿಶೀಲಿಸುವುದನ್ನು; ಮತ್ತು ಆ ವ್ಯಾಖ್ಯಾನವನ್ನು ವಿಸ್ತರಿಸಿ ತಮ್ಮದೇ ಪ್ರಶ್ನೆಗಳನ್ನು ಹುಡುಕಿಕೊಂಡು ತಮ್ಮ ತಿಳಿವಳಿಕೆಯನ್ನು ಹೆಚ್ಚಿಸುವುದನ್ನು ಒಳಗೊಳ್ಳಬಹುದು.

ಅಭ್ಯಾಸದ ವಿಷಯದಲ್ಲಿ, ಅವರು ಈಗಷ್ಟೇ ಕಲಿತದ್ದನ್ನು ಪುನರಾವರ್ತಿಸುವುದನ್ನು; ಒಂದು ನಿರ್ದಿಷ್ಟ ವಿಷಯ / ಪರಿಕಲ್ಪನೆಗೆ ವಿವಿಧ ರೀತಿಯ ಸಮಸ್ಯೆಗಳು ಅಥವಾ ಪ್ರಶ್ನೆಗಳನ್ನು ಪ್ರಯತ್ನಿಸುವುದನ್ನು; ಮತ್ತು ಅವರು ಕಲಿತದ್ದನ್ನು ಬಹುವಿಧದಲ್ಲಿ ಪ್ರತಿನಿಧಿಸುವುದನ್ನು ಇದು ಒಳಗೊಂಡಿರುತ್ತದೆ. ಉದಾಹರಣೆಗೆ, ಮಕ್ಕಳು ತಮ್ಮ ಸುತ್ತಲಿನ ಪ್ರಾಣಿಗಳ ಸರಳ ಸಮೀಕ್ಷೆಯನ್ನು ನಡೆಸಿ ಅದನ್ನು ಗಣಿತೀಯ ದತ್ತಾಂಶವಾಗಿ ಪಟ್ಟಿ ಮಾಡುತ್ತಾರೆ. ಮಕ್ಕಳು ತಮ್ಮ ಫಲಿತಗಳನ್ನು ಪ್ರಸ್ತುತಪಡಿಸಲು ಪ್ರಾಣಿಗಳ ಹೆಸರನ್ನು ಬರೆಯಬಹುದು ಅಥವಾ ಕೋಷ್ಟಕದಲ್ಲಿ ಪ್ರಾಣಿಗಳ ಚಿತ್ರಗಳನ್ನು ಬಿಡಿಸಬಹುದು.

'ಅಧ್ಯಯನ ಸಂಸ್ಕೃತಿ'ಯನ್ನು ಬೆಳೆಸಲು, ಬಲವರ್ಧನೆಯು ವಿವಿಧ ಮಟ್ಟದ ಕ್ಲಿಷ್ಟತೆಯುಳ್ಳ ಅಭ್ಯಾಸಗಳನ್ನು ಪ್ರಯತ್ನಿಸಬಹುದು; ಸರಳ ತನಿಖೆಗಳಂತಹ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು; ಸಂದರ್ಶನಗಳು; ಸಂಶೋಧನೆ; ದೀರ್ಘ ಮತ್ತು ಅಲ್ಪಾವಧಿಯ ಯೋಜನೆಗಳಿಗಾಗಿ ಜೋಡಿ–ಕೆಲಸ ಮತ್ತು ಗುಂಪು–ಕೆಲಸದಲ್ಲಿ ತೊಡಗಿಸಿಕೊಳ್ಳುವುದು; ಸರಳ ಕಲೆ ಮತ್ತು ಕರಕುಶಲಗಳನ್ನು ರಚಿಸುವುದು; ಒಂದು ತರಗತಿಗೆ ವಸ್ತು ಸಂಗ್ರಹಣೆ ಮಾಡುವುದು; ನಿಯಮಿತವಾಗಿ ಅಧ್ಯಯನ ಸಹವರ್ತಿಯೊಂದಿಗೆ ಕೆಲಸ ಮಾಡುವುದು; ಮತ್ತು ಕೆಲವು ವಿಷಯಗಳ (ಹಬ್ಬಗಳು, ವ್ಯಾಪಾರ, ಅಥವಾ ವಲಸೆ) ಕುರಿತು ಬರಹಗಳನ್ನು ರಚಿಸಲು ಸರಳ ಸಂದರ್ಶನಗಳ ಮೂಲಕ ಸಮುದಾಯ ಬೆಂಬಲ / ಆರೈಕೆಗೆ ಸಂಬಂಧಿಸಿದ ಚಟುವಟಿಕೆಗಳಲ್ಲಿ ತೊಡಗಿಸಿಕೊಳ್ಳುವುದು. ಇದನ್ನು ಮಾಡುವುದರಿಂದ, ಮಕ್ಕಳು ಮನೆಯಲ್ಲಿ ವಿಷಯದೊಂದಿಗೆ ತೊಡಗಿಸಿಕೊಳ್ಳುವುದು ಮಾತ್ರವಲ್ಲದೆ ತಮ್ಮ ಸಮುದಾಯವನ್ನು ಅರ್ಥಮಾಡಿಕೊಳ್ಳಲು ಮತ್ತು ಅದರ ಹಿತದ ಬಗ್ಗೆ ಕಾಳಜಿ ವಹಿಸಲು ಅದನ್ನು ಬಳಸಿಕೊಳ್ಳುತ್ತಾರೆ.

ನಮಗೆ ತಿಳಿದಿರುವಂತೆ, ವಿದ್ಯಾರ್ಥಿಗಳಿಗೆ ಈ ರೀತಿಯ ಬಲವರ್ಧನೆಗೆ ಬಹಳ ವಿರಳವಾಗಿ ಅವಕಾಶವನ್ನು ನೀಡಲಾಗುತ್ತದೆ. ಇದಕ್ಕೆ ಇನ್ನೊಂದು ಕಾರಣವೆಂದರೆ ನಾವು ತರಗತಿಯಲ್ಲಿ ,ಶಾಲಾ ಸಮಯದಲ್ಲಿ ತರಗತಿಯ ಹೊರಗೆ, ತರಗತಿಯಲ್ಲಿ ಪ್ರಾರಂಭಿಸಿ ಶಾಲಾ ನಂತರದ ಸಮಯಕ್ಕೆ ವಿಸ್ತಾರವಾಗುವಂತೆ ,ಮನೆಗೆಲಸವಾಗಿ ಪ್ರಾರಂಭಿಸಿ ಅದನ್ನು ತರಗತಿಗೆ ವಿಸ್ತರಿಸುವಂತೆ ಮತ್ತು ಶಾಲಾ ಸಮಯದ ನಂತರ ಬಲವರ್ಧನೆಯು ಸಂಭವಿಸುವಂತೆ ಯೋಜಿಸದಿರುವುದು.

ಇದು ನಮ್ಮನ್ನು ವೈವಿಧ್ಯದಿಂದ ಕೂಡಿದ ಚಟುವಟಿಕೆಗಳನ್ನು ಯೋಜಿಸಿ ವಿವಿಧ ಸಮಯಗಳಲ್ಲಿ ಅವುಗಳನ್ನು ಜಾರಿಗೊಳಿಸುವ ಪ್ರಶ್ನೆಯತ್ತ ಕರೆದೊಯ್ಯುತ್ತದೆ. ನಾನು ಶಾಲೆಗಳೊಂದಿಗೆ ಕೆಲಸ ಮಾಡುವ ಸಮಯದಲ್ಲಿ, ಕೆಲವು ಚಟುವಟಿಕೆಗಳನ್ನು ಆಯ್ಕೆ ಮಾಡಿ ಅವುಗಳನ್ನು ಪ್ರಯೋಗಿಸುವ ಪ್ರಯತ್ನವನ್ನು ಮಾಡಿದ್ದೇನೆ:

## ಭಾಷೆ

ಪರೀಕ್ಷೆಗಳ ಸಮಯದಲ್ಲಿ, ಕೊಟ್ಟಿರುವ ಚಿತ್ರದ ಬಗ್ಗೆ ಬರೆಯಲು ಮಕ್ಕಳು ಕಷ್ಟಪಡುವುದನ್ನು ನಾವು ನೋಡುತ್ತೇವೆ. ಅವರು ಪ್ರತಿಸ್ಪಂದಿಸಲು ಪ್ರಯತ್ನಿಸುವ (ಉದಾಹರಣೆಗೆ, ಚಿತ್ರ 1) ಕೆಲವು ವಿಧಾನಗಳೆಂದರೆ:

- ತಮಗೆ ತಿಳಿದಿರುವ ಅಕ್ಷರಗಳನ್ನು ಯಾದೃಚ್ಛಿಕವಾಗಿ ಬರೆಯುವುದು
- ಸಂಬಂಧವಿಲ್ಲದ ಏನನ್ನಾದರೂ ಬರೆಯುವುದು, ಅದನ್ನು ಹೆಚ್ಚಾಗಿ ಬೇರೆಡೆಯಿಂದ ನಕಲಿಸಲಾಗಿರುತ್ತದೆ
- ನಿರಂತರತೆ ಮತ್ತು ಸುಸಂಬದ್ಧತೆಯ ಕೊರತೆ ಇರುವ ಪದಗಳು ಅಥವಾ ಪದಗುಚ್ಛಗಳನ್ನು ಬರೆಯುವುದು
- ಚಿತ್ರದಲ್ಲಿರುವ ಎಲ್ಲವನ್ನೂ ಒಳಗೊಳ್ಳುವಂತೆ ವಾಕ್ಯ ರಚನೆಗಳನ್ನು ಪುನರಾವರ್ತಿಸುವುದು

ಈ ಪ್ರತಿಸ್ಪಂದನೆಗಳಿಂದ ಅರ್ಥವಾದದ್ದೇನೆಂದರೆ, ಮಕ್ಕಳು ಕೊಟ್ಟಿರುವ ಜಾಗವನ್ನು ತುಂಬುವಲ್ಲಿ ಅಗಾಧವಾದ ಒತ್ತಡವನ್ನು ಅನುಭವಿಸುತ್ತಾರೆ ಮತ್ತು ಕೇವಲ ಅಕ್ಷರಗಳ ಜ್ಞಾನವು ಉತ್ತಮ ಉಚಿತ ಪ್ರತಿಕ್ರಿಯೆಗಳನ್ನು ಖಾತರಿಪಡಿಸುವುದಿಲ್ಲ. ಹೀಗಾಗಿ, ಈ ಎರಡೂ ಸಮಸ್ಯೆಗಳನ್ನು ಬಗೆಹರಿಸುವಂತೆ ಚಟುವಟಿಕೆಗಳನ್ನು ಹೊಂದುವುದು ಯೋಜನೆಯಾಗಿತ್ತು:


- ಮಕ್ಕಳು ತಾವು ಅನುಭವಿಸಿದ ಬಗ್ಗೆ ಬರೆದಾಗ, ಆ ಬರವಣಿಗೆಯಲ್ಲಿ ಅರ್ಥವಿರಬೇಕು. ಏಕೆಂದರೆ ಅವರು ಏನನ್ನು ನೋಡುತ್ತಾರೆ ಅಥವಾ ಯೋಚಿಸುತ್ತಾರೆ ಎಂಬುದನ್ನು ವ್ಯಕ್ತಪಡಿಸುತ್ತದೆ (ಚಿತ್ರ 2).
- ಮಕ್ಕಳು ಲೇಖನ ಚಿಹ್ನೆಗಳ ಬಳಕೆ, ವಾಕ್ಯ ರಚನೆಗಳಲ್ಲಿ ವೈವಿಧ್ಯ, ವಿಶಾಲವಾದ ಶಬ್ದಕೋಶ, ವಸ್ತುಗಳ ಹೆಸರುಗಳು, ಇತ್ಯಾದಿ ಅಂಶಗಳ ಅಗತ್ಯವನ್ನು ಅರ್ಥಮಾಡಿಕೊಳ್ಳುವಾಗ, ಚೆನ್ನಾಗಿ ಬರೆಯುವುದು ಒಂದು ಗುರಿಯಾಗಿರಬೇಕು.

ಯೋಜಿತ ಚಟುವಟಿಕೆಗಳು ಈ ಕೆಳಗಿನಂತಿವೆ:


- ಪಾಠಕ್ಕಾಗಿ ಸಿದ್ಧಪಡಿಸಿದ ಪದಗಳ ಜಾರ್‌ಗಳು, ಫ್ಲ್ಯಾಶ್‌ಕಾರ್ಡ್‌ಗಳು, ಅನುಕ್ರಮ ಕಾರ್ಡ್‌ಗಳು ಮತ್ತು ಇತರ ಬೋಧನ ಕಲಿಕೆಯ ಸಾಮಗ್ರಿಗಳು.

ಇದನ್ನು ಸಾಮಾನ್ಯವಾಗಿ ವಿದ್ಯಾರ್ಥಿಗಳಿಗೆ ಪಾಠದಲ್ಲಿ ಪರಿಚಯಿಸಲಾದ ಹೊಸ ಪದಗಳ ಸಲುವಾಗಿ ಮಾಡಲಾಗುತ್ತದೆ. ಆದರೆ ಅವುಗಳ ಬಳಕೆ ಕಾಗುಣಿತವನ್ನು ನೆನಪಿಟ್ಟುಕೊಳ್ಳಲು ಮಾತ್ರ ಸೀಮಿತವಾಗಿದೆ. ಇದೇ ಚಟುವಟಿಕೆಯನ್ನು ವಿಸ್ತರಿಸಿ, ದೈನಂದಿನ ಚಟುವಟಿಕೆಗಳನ್ನು ವಾಕ್ಯ ರಚನೆ ಮಾಡಲು ಮತ್ತು ಪದಗಳ ಗುಂಪನ್ನು ಸಂಯೋಜಿಸಿ ಪಾಠದಲ್ಲಿನ ಒಂದು ಘಟನೆಯ ಬಗ್ಗೆ ಬರೆಯಲು ಬಳಸಲಾಯಿತು. ಈ ರೀತಿಯಾಗಿ, ವಿದ್ಯಾರ್ಥಿಗಳ ಗುಂಪುಗಳಿಗೆ ಎರಡು ಸೆಟ್ ಮನೆಗೆಲಸವನ್ನು ನೀಡಬಹುದು: ಒಂದು, ಗುಂಪು ಚಟುವಟಿಕೆಯಾಗಿ ತರಗತಿಯಲ್ಲಿ ಮಾಡಬೇಕಾದದ್ದು, ಎರಡನೆಯದಾಗಿ, ಇದೇ ಚಟುವಟಿಕೆಯು ವೈಯಕ್ತಿಕ ಕಾರ್ಯಕ್ಕೆ ವಿಸ್ತರಣೆಗೊಳ್ಳುವುದು.

ಕಲಿಕೆ: ಯಾವ ಮಕ್ಕಳು ತರಗತಿಯ ಸಮಯದಲ್ಲಿ ಕೆಲವು ಪದಗಳನ್ನು ಅಥವಾ ವಾಕ್ಯಗಳನ್ನು ಬರೆಯುತ್ತಾರೋ ಅವರು ಪದಗಳನ್ನು ಬಳಸಿ ಸಂಪೂರ್ಣ ವಾಕ್ಯಗಳನ್ನು ಬರೆಯುವ ಸಾಧ್ಯತೆ ಹೆಚ್ಚು. ಅವರು ಯಾವ ವಿಷಯದ ಬಗ್ಗೆ ಬರೆಯುವುದನ್ನು ನಿರೀಕ್ಷಿಸಲಾಗುತ್ತದೋ ಅದನ್ನು ಮೌಖಿಕವಾಗಿ ಚರ್ಚಿಸಲಾಗಿದ್ದರೆ ಮತ್ತು ಅದನ್ನು ಮೂರರಿಂದ ಐದು ವಾಕ್ಯಗಳಲ್ಲಿ ಬರೆಯಲು ಅವರಿಗೆ ಸ್ಪಷ್ಟ ಸೂಚನೆಗಳನ್ನು ನೀಡಲಾಗಿದ್ದರೆ, ಬರೆಯುವ ಸಾಧ್ಯತೆ ಹೆಚ್ಚು.




ಚಿತ್ರ 1: ಒಬ್ಬ ವಿದ್ಯಾರ್ಥಿಯು ಒಂದು ಚಿತ್ರವನ್ನು ವಿವರಿಸುವ ಪ್ರಯತ್ನದಲ್ಲಿ ಒಂದೇ ವಾಕ್ಯ ರಚನೆಯನ್ನು ಪುನರಾವರ್ತಿಸಿರುವುದು ಮತ್ತು ಸಂಬಂಧವಿಲ್ಲದ ಪದಗಳನ್ನು ಬಳಸಿರುವುದು.




ಚಿತ್ರ 2: ಒಂದು ಉತ್ತಮ ಬರೆವಣಿಗೆ: ಜಾತ್ರೆಗೆ ಹೋಗಿದ್ದನ್ನು ಬಣ್ಣಿಸಿರುವ ವಿದ್ಯಾರ್ಥಿ


- **ಬರೆವಣಿಗೆಯ ಸುಳುಹುಗಳ ಸರಣಿ ಬಳಕೆ**

ಶಿಕ್ಷಕರು ಮಕ್ಕಳಿಗೆ ಬರೆಯಲು ವಿಷಯಗಳನ್ನು ನೀಡುತ್ತಾರೆ. ಆದರೆ ಅವರ ಬರೆವಣಿಗೆಗೆ ಸಹಾಯ ಮಾಡುವ ಸುಳುಹುಗಳು ಮತ್ತು ಬರೆವಣಿಗೆಯಲ್ಲಿ ಯಾವುದರ ಮೇಲೆ ಗಮನವನ್ನು ಕೇಂದ್ರೀಕರಿಸಬೇಕು ಎಂಬ ಬಗ್ಗೆ ಸ್ಪಷ್ಟ ಸೂಚನೆಗಳನ್ನು ಸಾಮಾನ್ಯವಾಗಿ ನಿರ್ಲಕ್ಷಿಸಲಾಗುತ್ತದೆ. ಇದನ್ನು ಹೇಗೆ ಸುಧಾರಿಸಬಹುದು ಎಂಬುದರ ಮಾದರಿಯನ್ನು ಕೋಷ್ಟಕ 1 ರಲ್ಲಿ ತೋರಿಸಲಾಗಿದೆ.

### ಕೋಷ್ಟಕ 1. ಬರೆವಣಿಗೆಯ ಸುಳುಹುಗಳು

| ವಿಷಯ | 1ನೇ ದಿನ | 2ನೇ ದಿನ | 3 ಮತ್ತು 4ನೇ ದಿನಗಳು |
|---|---|---|---|
| ದಿನನಿತ್ಯದ ವಾಡಿಕೆ ಚಟುವಟಿಕೆಗಳ ಪಟ್ಟಿ ಮಾಡುವುದು | ಒಂದು ಗಡಿಯಾರದ ಚಿತ್ರ ಬರೆದು ಅದನ್ನು 5–6 ಚಟುವಟಿಕೆಗಳಾಗಿ ಭಾಗಿಸಿ. ವಿವಿಧ ಭಾಗಗಳಿಗೆ ಬೇರೆ ಬೇರೆ ಬಣ್ಣಗಳನ್ನು ತುಂಬಿರಿ. (ಅದು ಪೈ ಚಾರ್ಟ್ ನಂತೆ ಕಾಣಬೇಕು). | ಸಮಯದ ಜೊತೆ ಚಟುವಟಿಕೆಗಳನ್ನು ಬರೆಯಿರಿ. ಹಾಗೆಯೇ, ಗಡಿಯಾರದ ಮೇಲೆ ತೋರಿಸದ ಚಟುವಟಿಕೆಗಳನ್ನೂ ಸಹ ಬರೆಯಿರಿ. | ಈ ಪಟ್ಟಿಯನ್ನು ನಿಮ್ಮ ದಿನದ ಬಗ್ಗೆ ಬರೆಯಲು ಬಳಸಿ – ಪಟ್ಟಿಯಲ್ಲಿರುವ ಪ್ರತಿಯೊಂದು ವಸ್ತುವು ಒಂದು ವಾಕ್ಯವಾಗಬಹುದು. ಕೆಲವು ಹೆಚ್ಚುವರಿ ವಿಷಯಗಳನ್ನೂ ಸೇರಿಸಿ: ಅವುಗಳೆಂದರೆ, – ನಿಮ್ಮ ನೆಚ್ಚಿನ ಊಟದ ಬಗ್ಗೆ ಒಂದು ಸಾಲು. ನೀವು ದೂರದರ್ಶನವನ್ನು ವೀಕ್ಷಿಸುವಾಗ ಅಥವಾ ಗೆಳೆಯರೊಂದಿಗೆ ಆಟವಾಡುವಾಗ ನಿಮ್ಮ ಮನೆಯ ಇತರ ಸದಸ್ಯರು ಏನು ಮಾಡುತ್ತಾರೆ ಎಂಬ ಬಗ್ಗೆ ಒಂದು ಸಾಲು. |
| ನಿಮ್ಮ ಹಳ್ಳಿ / ಗ್ರಂಥಾಲಯದ ಬಗ್ಗೆ ಬರೆಯುವುದು | ನೀವು ನೋಡುವ ಪ್ರತಿಯೊಂದರ ಪಟ್ಟಿಯನ್ನು ತಯಾರಿಸಿರಿ. | ಚಟುವಟಿಕೆಗಳ ಕುರಿತ ಈ ಕೆಳಗಿನವುಗಳ ಆಧಾರದ ಮೇಲೆ ಟಿಪ್ಪಣಿ ಮಾಡಿ: ಏನು – ಯಾರು – ಯಾವಾಗ – ಹೇಗೆ | ಕೋಷ್ಟಕದಲ್ಲಿನ ವಿವರಗಳನ್ನು ಬಳಸಿಕೊಂಡು ವಾಕ್ಯಗಳನ್ನು ಬರೆಯಿರಿ. |

ಕಲಿಕೆ: ಬರೆವಣಿಗೆಯ ಸುಳುಹುಗಳು ಆವಶ್ಯಕ. ಆದರೆ ಅವುಗಳ ವಿಭಿನ್ನ ಅಂಶಗಳನ್ನು ಗಣನೆಗೆ ತೆಗೆದುಕೊಂಡು ನಿರ್ಧರಿಸಬೇಕು ಮತ್ತು ನಿಯೋಜಿಸಬೇಕು. ಉದಾಹರಣೆಗೆ, ಓರ್ವ ಶಿಕ್ಷಕರು ಜೋಡಿ ಪದಗಳನ್ನು (ಅಲ್ಲಿ – ಇಲ್ಲಿ, ಪೂರಿ – ಗೀರಿ, ಮತ್ತು ಹೋಕಸ್ – ಪೋಕಸ್ ಮುಂತಾದ ಪದಗಳು) ಬಳಸಿಕೊಂಡು ಕನ್ನಡದಲ್ಲಿ ಕಥೆಯನ್ನು ರಚಿಸುವಂತೆ ವಿದ್ಯಾರ್ಥಿಗಳಿಗೆ ಹೇಳಿದ್ದರು. ಆದರೆ ಅದನ್ನು ಸಾಕಷ್ಟು ವಿವರಿಸಿರಲಿಲ್ಲ. ಆದ್ದರಿಂದ ವಿದ್ಯಾರ್ಥಿಗಳು ಪ್ರತಿಯೊಂದು ಪದವನ್ನೂ ಜೋಡಿ ಪದವನ್ನಾಗಿಸಿ ಕಥೆಗಳನ್ನು ರಚಿಸಿದರು ಮತ್ತು ಅವರು ಬರೆದ ಕಥೆಗಳು ಬಹುತೇಕ ಓದಲು ಯೋಗ್ಯವಾಗಿರಲಿಲ್ಲ!



ಚಿತ್ರ 3: ಸ್ಪಷ್ಟ ಸೂಚನೆಗಳೊಂದಿಗಿನ ಬರೆವಣಿಗೆಯ ಸುಳುಹುಗಳು ಭಾಷಾ ಕಲಿಕೆಯನ್ನು ಪುನರ್ನಬಲನಗೊಳಿಸಲು ಸಹಾಯ ಮಾಡುತ್ತವೆ.

### ಗಣಿತ


ಗಣಿತದ ಪರೀಕ್ಷೆಗಳನ್ನು ನಡೆಸುವಾಗ ಕಂಡುಬಂದ ಒಂದು ಸಾಮಾನ್ಯ ಸವಾಲೆಂದರೆ ಮಕ್ಕಳಿಗೆ ತಮಗೆ ತಿಳಿದಿರುವ 'ಕಾರ್ಯವಿಧಾನಗಳನ್ನು' ಪುನರಾವರ್ತಿಸುವುದು ಹೆಚ್ಚು ಆರಾಮದಾಯಕವಾಗಿದೆ. ಉದಾಹರಣೆಗೆ:

- ಅವರು ಎರಡು ಸಂಖ್ಯೆಗಳು ಲಂಬವಾಗಿ ಇದ್ದರೆ ಅವುಗಳನ್ನು ಕೂಡಬೇಕು ಎಂದು ಊಹಿಸುತ್ತಾರೆ. ಅಥವಾ, ಸಂಖ್ಯೆಗಳನ್ನು ಗುಣಿಸುವುದನ್ನು ನಿರೀಕ್ಷಿಸಲಾಗಿದೆ ಎಂದು ಅವರು ಅರ್ಥಮಾಡಿಕೊಂಡರೂ ಸಹ, ಅವರಿಗೆ ಗುಣಾಕಾರ ತಿಳಿದಿಲ್ಲದಿದ್ದರೆ, ಅವರು ಸಂಖ್ಯೆಗಳನ್ನು ಕೂಡಿಸುತ್ತಾರೆ. ಏಕೆಂದರೆ ಅವರು ಇದನ್ನು ಮಾತ್ರ ಮಾಡಲು ಸಾಧ್ಯ.
- ಅವರು ಮೂಲಭೂತ ಕ್ರಿಯೆಗಳ ಕೆಲವು ತಂತ್ರಗಳಿಗೆ – ಕೂಡಿಸಲು ಮತ್ತು ಕಳೆಯಲು ಗೆರೆಗಳನ್ನು ಎಳೆಯುವುದು – ಮಾತ್ರ ಒಗ್ಗಿಕೊಂಡಿದ್ದಾರೆ. ಇದು ಸಮಯ ವ್ಯಯಕ್ಕೆ ಕಾರಣವಾಗುತ್ತದೆ ಮತ್ತು ನಾಲ್ಕರಿಂದ ಐದು ಲೆಕ್ಕಗಳನ್ನು ನೀಡಿದಾಗ, ಅವರು ಅವುಗಳಲ್ಲಿ ಕೆಲವನ್ನು ಮಾತ್ರ ಪೂರ್ಣಗೊಳಿಸಿ ಉಳಿದವುಗಳನ್ನು ಬಿಟ್ಟುಬಿಡುತ್ತಾರೆ.


ಇದರಿಂದ ಮಕ್ಕಳಿಗೆ ಕಳಪೆ ಬೋಧನೆ ನೀಡಲಾಗುತ್ತಿಲ್ಲ. ಬದಲಿಗೆ, ಬಲವರ್ಧನೆಯ ರೂಪದಲ್ಲಿ ನೀಡಬೇಕಿದ್ದ ಅವಕಾಶಗಳು ಸೀಮಿತವಾಗಿವೆ ಎಂಬ ತೀರ್ಮಾನಕ್ಕೆ ಕಾರಣವಾಯಿತು. ಬಲವರ್ಧನೆಯಾಗಿ ಕಂಡುಬರುವ ಚಟುವಟಿಕೆಗಳ ಕೆಲವು ಉದಾಹರಣೆಗಳನ್ನು ಕೋಷ್ಟಕ 2 ರಲ್ಲಿ ತೋರಿಸಲಾಗಿದೆ.

**ಕೋಷ್ಟಕ 2. ಗಣಿತಕ್ಕಾಗಿ ಬಲವರ್ಧನೆಯ ಚಟುವಟಿಕೆಗಳು**

| ವಿಷಯ | ತರಗತಿಯಲ್ಲಿ | ತರಗತಿಯ ಹೊರಗೆ | ಮನೆಯಲ್ಲಿ |
|---|---|---|---|
| ವಿಂಗಡನೆ ಮತ್ತು ಎಣಿಕೆ | ನಲಿ–ಕಲಿ ಕಾರ್ಡ್‌ಗಳ ಆಧಾರದ ಮೇಲೆ ಎಣಿಕೆಯ ಚಟುವಟಿಕೆಗಳು | ಮಕ್ಕಳಿಗೆ ವಿವಿಧ ಬಗೆಯ ಹೂಗಳ ಚಿತ್ರಪಟಗಳನ್ನು ಕೊಟ್ಟು ಅವುಗಳ ದಳಗಳನ್ನು ಪ್ರತಿನಿಧಿಸುವಂತೆ ಕಲ್ಲುಗಳನ್ನು ಜೋಡಿಸುವಂತೆ ಕೇಳುವುದು | ಶಾಲೆಯಿಂದ ಬರುವಾಗ ಎಲೆಗಳು, ಹೂವುಗಳು, ಗರಿಕೆಹುಲ್ಲು ಇತ್ಯಾದಿಗಳನ್ನು ಶೇಖರಿಸಿ ಅವುಗಳ ಬಣ್ಣ/ಆಕಾರ/ಸಂಖ್ಯೆ/ವಿನ್ಯಾಸ, ಇತ್ಯಾದಿಗಳಿಗೆ ಅನುಗುಣವಾಗಿ ವಿಂಗಡಿಸುವುದು.<br>ತಮ್ಮ ಮನೆಯಲ್ಲಿ ಅಥವಾ ಸುತ್ತಲಿನ ಪರಿಸರದಲ್ಲಿ ಅವರು ನೋಡುವ ಕನಿಷ್ಠ 5 ವಸ್ತುಗಳನ್ನು ಎಣಿಸಿ ಅವುಗಳನ್ನು ತಮ್ಮ ಚಿತ್ರಗಳಲ್ಲಿ ತೋರಿಸುವುದು. |
| ಮಾದರಿಗಳು | ಕೊಟ್ಟಿರುವ ಒಂದು ಅನುಕ್ರಮವನ್ನು ಮುಂದುವರಿಸುವುದನ್ನು ಒಂದು ಗುಂಪಾಗಿ ಅಭ್ಯಾಸ ಮಾಡುವುದು | | ತಮ್ಮ ಸ್ವಂತ ಮಾದರಿಗಳನ್ನು ರಚಿಸುವುದು ಮತ್ತು ಅವುಗಳ ಚಿತ್ರ ಬಿಡಿಸುವುದು. |
| ಸಂಖ್ಯೆಗಳ ಜ್ಞಾನ | ದಿಕ್ಸೂಚಿ ಕಾರ್ಡ್‌ಗಳನ್ನು ಬಳಸಿಕೊಂಡು ಸಂಖ್ಯೆಗಳನ್ನು ರಚಿಸುವುದು ಮತ್ತು ಓದುವುದು, ಅವುಗಳ ವಿಸ್ತೃತ ರೂಪವನ್ನು ತೋರಿಸುವುದು, ಮತ್ತು ಪದಗಳಲ್ಲಿ ಬರೆಯುವುದು. | | ತಮ್ಮ ಸ್ವಂತ ದಿಕ್ಸೂಚಿ ಕಾರ್ಡ್‌ಗಳನ್ನು ತಯಾರಿಸುವುದು:<br>ಮಕ್ಕಳು ಎರಡು–, ಮೂರು–, ಅಥವಾ ನಾಲ್ಕು–ಅಂಕಿಯ ಸಂಖ್ಯಾ ಮಟ್ಟಗಳಲ್ಲಿ ಯಾವ ಹಂತದಲ್ಲಿ ಇದ್ದಾರೆ ಎಂಬುದರ ಆಧಾರದ ಮೇಲೆ ನಿರ್ದಿಷ್ಟ ದಿಕ್ಸೂಚಿ ಕಾರ್ಡ್‌ಗಳನ್ನು ತಯಾರಿಸುವ ಕೆಲಸ ಕೊಡಬಹುದು |



ಚಿತ್ರ 4: ಒಂದು ಸರಿಯಾದ ಅನುಕ್ರಮವನ್ನು ರಚಿಸಿರುವ ವಿದ್ಯಾರ್ಥಿಯ ಕೆಲಸ



ಚಿತ್ರ 5: ಸರಿಯಾದ ಅನುಕ್ರಮವನ್ನು ರಚಿಸಿರುವ ಇನ್ನೊಬ್ಬ ವಿದ್ಯಾರ್ಥಿಯ ಕೆಲಸ

## ಸಮಾರೋಪ ನುಡಿಗಳು

ಶಿಕ್ಷಕರು ಮತ್ತು ಮಕ್ಕಳೊಂದಿಗೆ ಬಲವರ್ಧನೆಯ ಮೇಲೆ ಕೆಲಸ ಮಾಡಿದ ನಾನು ಬಹಳಷ್ಟು ತಿಳಿದುಕೊಂಡಿದ್ದೇನೆ. ಅವುಗಳಲ್ಲಿ ಕೆಲವು ಕಲಿಕೆಗಳು ಈ ಕೆಳಗಿನಂತಿವೆ:


- ಬಲವರ್ಧನೆಯ ಕಲಿಕೆಯಲ್ಲಿ ಚಟುವಟಿಕೆಗಳನ್ನು ಹೇಗೆ ಯೋಜಿಸಲಾಗಿದೆ ಮತ್ತು ನೀಡಿರುವ ಸೂಚನೆಗಳು ಎಷ್ಟು ಸ್ಪಷ್ಟವಾಗಿವೆ ಎಂಬುದರ ಆಧಾರದ ಮೇಲೆ ಅವು ರಚನಾತ್ಮಕವಾಗಿರಬಹುದು.

- ಯಾವುದೇ ದಿನ ಅಥವಾ ವಾರದಲ್ಲಿ, ಮಕ್ಕಳು ಬರೆವಣಿಗೆಯ ಚಟುವಟಿಕೆಗಳಲ್ಲಿ ಮತ್ತು ತರಗತಿಯ ಒಳಗೆ ಎಷ್ಟು ಸಮಯವನ್ನು ಕಳೆದಿದ್ದಾರೆ ಎಂಬಂತಹ ಕೆಲವು ಮೂಲಭೂತ ಅಂಶಗಳ ಮೇಲೆ ಪ್ರತಿಫಲಿಸುವ ಮೂಲಕ ಉತ್ತಮ ಬಲವರ್ಧನೆಯ ಚಟುವಟಿಕೆಗಳನ್ನು ಯೋಜಿಸಬಹುದು. ವೃತ್ತಿಪರರಾಗಿ, ನಾವು ಇದರ ಮೇಲೆ ಮಿತಿಯನ್ನು ಹೊಂದಿಸಲು ಸಾಧ್ಯವಾದರೆ, ನಾವು ಕೇವಲ ಒಂದರಿಂದ ಎರಡು ಕ್ಷೇತ್ರಗಳ (ಪದಗಳ ಕಾಗುಣಿತವನ್ನು ನೆನಪಿಟ್ಟುಕೊಳ್ಳುವುದು, ಲೆಕ್ಕ ಮಾಡುವುದು) ಮೇಲೆ ಮಾತ್ರ ಗಮನ ಹರಿಸುತ್ತಿದ್ದೇವೆ ಮತ್ತು ಬಲವರ್ಧನೆಯ ಚಟುವಟಿಕೆಗಳಲ್ಲಿ ವೈವಿಧ್ಯವನ್ನು ಕಾಯ್ದುಕೊಳ್ಳುತ್ತಿಲ್ಲ ಎಂದು ಆಲೋಚನೆ ಮಾಡಲು ಸಾಧ್ಯವಾಗುತ್ತದೆ.

- ತರಗತಿಗಾಗಿ ಅಭಿವೃದ್ಧಿಪಡಿಸಲಾದ ಬಹಳಷ್ಟು ಬೋಧನ ಕಲಿಕೆಯ ಸಾಮಗ್ರಿಗಳನ್ನು ಅವುಗಳ ಸಂಪೂರ್ಣ ಸಾಮರ್ಥ್ಯಕ್ಕೆ ತಕ್ಕಂತೆ ಬಳಸಲಾಗುವುದಿಲ್ಲ. ಏಕೆಂದರೆ ಅವುಗಳು ಕಲಿಕೆಯನ್ನು ಬಲವರ್ಧನೆಗೊಳಿಸುವುದರೊಂದಿಗೆ ಸಂಬಂಧ ಹೊಂದಿಲ್ಲ. ಬೋಧನ ಕಲಿಕಾ ಸಾಮಗ್ರಿಗಳನ್ನು ಸ್ವತಃ ಬಳಸುವಂತೆ ಮಕ್ಕಳಿಗೆ ಸೂಚನೆಗಳನ್ನು ನೀಡಲು ಸ್ವಲ್ಪ ಸಮಯವನ್ನು ಕಳೆಯುವುದೇ ಸ್ವತಃ ಬಲವರ್ಧನೆಯಾಗಿದೆ. ಜೊತೆಗೆ, ತಮ್ಮದೇ ಆದ ವಿಷಯವನ್ನು ಅನ್ವೇಷಿಸಲು ಮಕ್ಕಳಿಗೆ ಇದು ಅವಕಾಶವನ್ನು ನೀಡುತ್ತದೆ.

- ಪರ್ಯಾಯ ಬೋಧನ ವಿಧಾನಗಳು ಸರಳ ಚಟುವಟಿಕೆಗಳೊಂದಿಗೆ ಪ್ರಾರಂಭವಾಗಿ, ನಿಧಾನವಾಗಿ ವಿಕಸನಗೊಳ್ಳಬಹುದು. ಉದಾಹರಣೆಗೆ, ಹೊರಾಂಗಣದಲ್ಲಿ ಕುಳಿತುಕೊಂಡು ಕಥೆಯನ್ನು ನಿರೂಪಿಸುವುದು ಅಥವಾ ಹೆಚ್ಚಿನ ಸಂಖ್ಯೆಯ ಮಕ್ಕಳುಳ್ಳ ತರಗತಿಯನ್ನು ವಿವಿಧ ಚಟುವಟಿಕೆಗಳ ಒಳಾಂಗಣ ಮತ್ತು ಹೊರಾಂಗಣ ಗುಂಪುಗಳಾಗಿ ವಿಭಜಿಸುವುದು. ಹೊರಾಂಗಣ ಚಟುವಟಿಕೆಗಳನ್ನು ನಿಯೋಜಿಸಲಾದ ಮಕ್ಕಳು ಸರಳ ಸಮೀಕ್ಷೆಗಳು ಮತ್ತು ದತ್ತಾಂಶ ಸಂಗ್ರಹಣೆ, ಪಠ್ಯಗಳನ್ನು ಜೊತೆಯಲ್ಲಿ ಓದುವಿಕೆ, ಶಿಕ್ಷಕರು ಸೂಚನೆಗಳನ್ನು ನೀಡಿರುವಂತಹ ಅಭ್ಯಾಸಗಳನ್ನು ಬಗೆಹರಿಸುವುದು, ಇತ್ಯಾದಿಗಳನ್ನು ಮಾಡಬಹುದು. ಏಕೆಂದರೆ ಅವರು ಈ ಚಟುವಟಿಕೆಗಳನ್ನು ಶಿಕ್ಷಕರ ನೇರ ಮೇಲ್ವಿಚಾರಣೆ ಇಲ್ಲದೆಯೇ ಮಾಡಬಹುದು. ಇದು ತಕ್ಷಣದ ಪರಿಣಾಮವನ್ನು ಬೀರಬೇಕಾಗಿಲ್ಲ. ಆದರೆ ತರಗತಿಯಲ್ಲಿ ಸ್ವಲ್ಪ ಮೋಜನ್ನು ಹೊಂದುವ ಉದ್ದೇಶದಿಂದ ಕೆಲವು ಕ್ರಮಗಳನ್ನು ಸಹ ತೆಗೆದುಕೊಳ್ಳಬಹುದು. ವಿಶೇಷವಾಗಿ, ವಿದ್ಯಾರ್ಥಿಗಳ ಸಂಖ್ಯೆಯು ತುಂಬಾ ಹೆಚ್ಚಿರುವ ಶಾಲೆಗಳಲ್ಲಿ, ಅಂತಹ ಕ್ರಮಗಳು ಎಲ್ಲಾ ಮಕ್ಕಳನ್ನು ಗುಣಾತ್ಮಕವಾಗಿ ತೊಡಗಿಸಿಕೊಳ್ಳುತ್ತವೆ. ಇಲ್ಲವಾದಲ್ಲಿ, ಒಂದು ಸಣ್ಣ ಗುಂಪಿನ ವಿದ್ಯಾರ್ಥಿಗಳು ಮಾತ್ರ ಶಿಕ್ಷಕರ ಯೋಜನೆಯನ್ನು ಅನುಸರಿಸಲು ಸಾಧ್ಯವಾಗುತ್ತದೆ.

ಬಲವರ್ಧನೆಯು ಕಲಿಕೆಗೆ ಸಮರ್ಪಕವಾಗಿ ಮತ್ತು ಸೂಕ್ತವಾಗಿ ಪ್ರಾಮುಖ್ಯವನ್ನು ನೀಡುವುದರಿಂದ ಕಲಿಕೆಯು ಸುಧಾರಿಸುತ್ತದೆ ಹಾಗೂ ಮಕ್ಕಳು ಶಾಲೆಯನ್ನು ಸಂತೋಷದ ತಾಣವಾಗಿ ಕಂಡುಕೊಳ್ಳುವ; ಸ್ವಯಂಪ್ರೇರಿತ ಉತ್ತರಗಳನ್ನು ನೀಡಲು ಹಿಂಜರಿಯದ; ಅವರು ಹೆಚ್ಚು ತೊಡಗಿಸಿಕೊಂಡಿರುವ ಕಾರಣ ಉತ್ಸಾಹದಿಂದ ತಮ್ಮ ಮನೆಗೆಲಸವನ್ನು ಪೂರ್ಣಗೊಳಿಸುವ ಮತ್ತು ಪರೀಕ್ಷೆಗಳೆಂದರೆ ಮಕ್ಕಳು ಅಭ್ಯಸಿಸಿರುವುದನ್ನು 'ಪುನರುತ್ಪಾದಿಸುವ' ಪ್ರಯತ್ನವೆಂದು ನೋಡದೆ, ಬದಲಾಗಿ ಸಮರ್ಪಕವಾಗಿ ಅರಿತುಕೊಳ್ಳದೆ ಉಳಿದಿರುವುದನ್ನು ಬಲವರ್ಧನೆಗೊಳಿಸುವ ಅವಕಾಶವೆಂದು ಪರಿಗಣಿಸುವ ಶಿಕ್ಷಕರನ್ನು ಹೊಂದುವಂತಹ ದೊಡ್ಡ ಪರಿಣಾಮವನ್ನು ಬೀರುತ್ತದೆ ಎಂದು ನಾನು ನಂಬುತ್ತೇನೆ.




**ಚಿತ್ರ 6: ಮಕ್ಕಳು ಆನಂದಿಸುವ ಗಣಿತ ಬಲವರ್ಧನೆ ಚಟುವಟಿಕೆ**

---



**ಅರ್ಚನಾ** ಅವರು ಅಜೀಂ ಪ್ರೇಮ್‌ಜಿ ಫೌಂಡೇಷನ್, ಯಾದಗಿರಿಯ ಸಂಪನ್ಮೂಲ ವ್ಯಕ್ತಿ. ಮಕ್ಕಳ ಸಾಹಿತ್ಯ, ಚಲನಚಿತ್ರಗಳು, ಮತ್ತು ವಿಮರ್ಶಾತ್ಮಕ ಬೋಧನ ವಿಧಾನ, ಅವರ ಆಸಕ್ತಿ ಕ್ಷೇತ್ರಗಳಾಗಿವೆ. ಅವರಿಗೆ ಪುಸ್ತಕಗಳು, ಬೆಕ್ಕುಗಳು ಮತ್ತು ಅನಿಮೇಷನ್ ಗಳಲ್ಲಿ ವಿಶೇಷ ಪ್ರೀತಿ ಇದ್ದು, ಮಣಿಪಾಲ್ ಅಕಾಡೆಮಿ ಆಫ್ ಹೈಯರ್ ಎಜುಕೇಶನ್ ನಲ್ಲಿ ಇಂಗ್ಲಿಷ್ ವಿಷಯದಲ್ಲಿ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಅವರನ್ನು archana.r@azimpremjifoundation.org ಮೂಲಕ ಸಂಪರ್ಕಿಸಬಹುದು.

ಅನುವಾದ: **ನಿವೇದಿತಾ ಬಿ** | ಪರಿಶೀಲನೆ: **ಮೆಲ್ವಿನ್ ಮೆಂಡೊನ್ಸಾ**